ಸಾಕ್ಷಿಯನ್ನು ದಿನಾಂಕ 19-08-2019ರಂದು ನ್ಯಾಯಾಲಯಕ್ಕೆ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಎಸ್.ವಿ. ರವರಿಂದ :-**

ದಾವಾಆಸ್ತಿಗಳು ತೋಟಇನಾಂತಿ ಆಸ್ತಿಗಳು ಎಂದರೆ ಸರಿ. ದಾವಾಆಸ್ತಿಗಳು ಗುಮತಿ ವೆಂಕಟಪ್ಪ, ಗುಮತಿ ಚಿನ್ನಪ್ಪ, ಕಾಕೋಡು ಗಂಟ್ಲೋಡು ಎನ್ನುವವರಿಗೆ ಮಂಜೂರಾಗಿದೆ ಎಂದರೆ ಸರಿ. ಸದರಿ ಆಸ್ತಿಗಳು ಅವರಿಗೆ 1987ರಲ್ಲಿ ಮಂಜೂರಾಗಿದೆ ಎಂದರೆ ಸರಿ. ಗುಮತಿ ವೆಂಕಟಪ್ಪ ಮತ್ತು ಗುಮತಿ ಚಿನ್ನಪ್ಪನವರಿಗೆ ತಲಾ 1/4 ಭಾಗ ಆಸ್ತಿಗಳು ಮಂಜೂರಾಗಿದ್ದು, ಕಾಕೋಡು ಗಂಟ್ಲೋಡು ಎನ್ನುವವರಿಗೆ 1/2 ಭಾಗದ ಆಸ್ತಿ ಮಂಜೂರಾಗಿದೆ ಎಂದರೆ ಸರಿ. ಮಂಜೂರಾದ ನಂತರ ಆ ಮೂವರ ಹೆಸರಿಗೆ ಪ್ರತ್ಯೇಕವಾಗಿ ವಿಭಾಗಗಳಾಗಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಈಗಾಗಲೇ ವಿಭಾಗಗಳಾಗಿವೆ ಎಂದು ನುಡಿಯುತ್ತಾರೆ. ದಿನಾಂಕ 24-04-1973ರಲ್ಲಿ ವಿಭಾಗಗಳಾಗಿರುತ್ತದೆ. ವಿಭಾಗಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ವಿಭಾಗಪತ್ರದ ಪ್ರಕಾರವಾಗಿ ಗುಮತಿ ವೆಂಕಟಪ್ಪ, ಗುಮತಿ ಚಿನ್ನಪ್ಪ, ಕಾಕೋಡು ಅಲಿಯಾಸ್ ಗಂಟ್ಲೋಡು ರವರಿಗೆ ಪಹಣಿ ಮತ್ತು ಮ್ಯುಟೇಷನ್ ಆಗಿರುತ್ತದೆ.

ಸ.ನಂ.33ರಲ್ಲಿ 17 ಗುಂಟೆ ಇದ್ದು, 1 ಗುಂಟೆ ಖರಾಬು ಇರುತ್ತದೆ. ಸ.ನಂ.33ರ 17 ಗುಂಟೆಯಲ್ಲಿ ಯಾರ್‍ಯಾರಿಗೆ ಯಾವ ಯಾವ ಕಡೆ ಭಾಗಗಳಾಗಿವೆ ಎಂದು ಕೇಳಿದ್ದಕ್ಕೆ ಸಾಕ್ಷಿಯು ವಿಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ. ಗುಮತಿ ಚಿನ್ನಪ್ಪ ನನಗೆ ಚಿಕ್ಕಪ್ಪನಾಗಬೇಕು. ಗುಮತಿ ಚಿನ್ನಪ್ಪನಿಗೆ ಒಬ್ಬ ಮಗ ಇದ್ದು, ಅವನ ಹೆಸರು ಗಂಟಪ್ಪ. ಸದರಿ ಗಂಟಪ್ಪ ಈಗ ತೀರಿಕೊಂಡಿರುತ್ತಾರೆ. ಗಂಟಪ್ಪನ ಹೆಂಡತಿಯ ಹೆಸರು ರಾಜಮ್ಮ. ಕಾಕೋಡು ಗಂಟ್ಲೋಡು ರವರಿಗೆ ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ವೆಂಕಟಲಕ್ಷ್ಮಮ್ಮ ಮತ್ತು ಸರಸಮ್ಮ. ಗುಮತಿ ಚಿನ್ನಪ್ಪ 2009ರಲ್ಲಿ ಮರಣ ಹೊಂದಿರುತ್ತಾರೆ. ಕಾಕೋಡು ಗಂಟ್ಲೋಡು ರವರು ಈ ದಾವೆಯನ್ನು ಸಲ್ಲಿಸುವ 15 ವರ್ಷಗಳ ಪೂರ್ವದಲ್ಲೇ ಮರಣ ಹೊಂದಿರುತ್ತಾರೆ. ಗ್ರ್ಯಾಂಟ್ ಆದ ನಂತರ ಕಾಕೋಡು ಗಂಟ್ಲೋಡು, ಗುಮತಿ ಚಿನ್ನಪ್ಪ ಮತ್ತು ಗುಮತಿ ವೆಂಕಟಪ್ಪ ತಮ್ಮ ತಮ್ಮ ವಾರಸುದಾರರೊಂದಿಗೆ ದಾವಾಆಸ್ತಿಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ,

ಸಾಕ್ಷಿಯು ಮುಂದುವರೆದು ದಾವಾಆಸ್ತಿಗಳ ಸ್ವಾಧೀನದಲ್ಲಿ ನಾವೇ ಇದ್ದೇವೆ ಎಂದು ನುಡಿಯುತ್ತಾರೆ. ದಾವಾಆಸ್ತಿಗಳ ಸ್ವಾಧೀನದಲ್ಲಿ ನಾವು ಇದ್ದೇವೆ ಎಂದು ತೋರಿಸಲು ಕ್ರಯದ ಕರಾರುಪತ್ರ ಇರುತ್ತದೆ.

ಗುಮತಿ ಚಿನ್ನಪ್ಪ ಮತ್ತು ಕಾಕೋಡು ಅಲಿಯಾಸ್ ಗಂಟ್ಲೋಡುರವರು ನನ್ನ ತಂದೆಗೆ ಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ತಂದೆಗೆ ದಿನಾಂಕ 24-04-1973ರಂದು ಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ನನ್ನ ತಂದೆ ಡೆಪ್ಯುಟಿ ಕಮೀಷನರ್‌ರವರ ಮುಂದೆ ಗ್ರ್ಯಾಂಟ್ ಆಗುವ ಕಾಲಕ್ಕೆ ಯಾವುದೇ ಸ್ಟೇಟ್‌ಮೆಂಟ್ ನೀಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ-8 ದಾಖಲಾತಿಯಲ್ಲಿ ಗುಮತಿ ಚಿನ್ನಪ್ಪನಾಗಲೀ ಅಥವಾ ಕಾಕೋಡು ಅಲಿಯಾಸ್ ಗಂಟ್ಲೋಡುರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-8ನ್ನು ನಾನೇ ಸೃಷ್ಟಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-8ನ್ನು ನಾನು ಕೃಷ್ಣಮೂರ್ತಿರವರೊಂದಿಗೆ ಶಾಮೀಲಾಗಿ ಸೃಷ್ಟಿಸಿದ ದಾಖಲಾತಿ ಎಂದರೆ ಸರಿಯಲ್ಲ. ಒಂದು ವೇಳೆ ನಿಪಿ-8ನ್ನು ಗುಮತಿ ಚಿನ್ನಪ್ಪ ಅಥವಾ ಕಾಕೋಡು ಅಲಿಯಾಸ್ ಗಂಟ್ಲೋಡುರವರು ಬರೆದುಕೊಟ್ಟಿದ್ದೇ ನಿಜವಾದಲ್ಲಿ ಗ್ರ್ಯಾಂಟ್ ಆದ ನಂತರವೇ ಕ್ರಯಪತ್ರವನ್ನು ಮಾಡಿಕೊಳ್ಳಲು ಯಾವುದೇ ಅಭ್ಯಂತರ ಇರಲಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿಯು ಅವರಿಬ್ಬರು ಪಹಣಿಪತ್ರ ಬಂದ ನಂತರ ಮಾಡಿಕೊಡುವುದಾಗಿ ಹೇಳಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಐಎನ್‌ಎ ನಂ. 206/1978-79ರ ಪ್ರಕಾರ ಪಹಣಿಪತ್ರಿಕೆಗಳು ಗುಮತಿ ಚಿನ್ನಪ್ಪ ಅಥವಾ ಕಾಕೋಡು ಅಲಿಯಾಸ್ ಗಂಟ್ಲೋಡುರವರ ಹೆಸರಿಗೆ 1978ರಲ್ಲೇ ಬಂದಿದೆ ಎಂದರೆ ಸಾಕ್ಷಿಯು ರೀಗ್ರ್ಯಾಂಟ್ ಆದ ನಂತರ ಬಂದಿದೆ ಎಂದು ನುಡಿಯುತ್ತಾರೆ. 1987ರಲ್ಲಿ ಗುಮತಿ ಚಿನ್ನಪ್ಪ ಅಥವಾ ಕಾಕೋಡು ಅಲಿಯಾಸ್ ಗಂಟ್ಲೋಡುರವರ ಹೆಸರಿಗೆ ಪಹಣಿಪತ್ರಿಕೆಗಳು ಬಂದಿರುತ್ತದೆ.

ಕಾಕೋಡು ಅಲಿಯಾಸ್ ಗಂಟ್ಲೋಡು ಮತ್ತು ನಮಗೂ ಯಾವುದೇ ಸಂಬಂಧ ಇರುವುದಿಲ್ಲ. ಕಾಕೋಡು ಅಲಿಯಾಸ್ ಗಂಟ್ಲೋಡುರವರು ಬೇರೆ ಯಾವುದೇ ದಾಖಲಾತಿಯನ್ನು ನನ್ನ ಹೆಸರಿಗೆ ಬರೆದುಕೊಟ್ಟಿರುವುದಿಲ್ಲ. ಸಂಪೂರ್ಣ ತೋಟ ಇನಾಂತಿ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಬರೀ ಆರು ಜಮೀನುಗಳಿಗೆ ಸಂಬಂಧಿಸಿದಂತೆ ಮಾತ್ರ ಈ ಕೇಸನ್ನು ದಾಖಲು ಮಾಡಲಾಗಿದೆ ಎಂದು ನುಡಿಯುತ್ತಾರೆ. ಗ್ರ್ಯಾಂಟ್‌ನಲ್ಲಿ ಇನ್ನೂ ಎರಡು ಆಸ್ತಿಗಳು

ಬಂದಿರುತ್ತವೆ, ಅವುಗಳು ಸ.ನಂ. 118 ಮತ್ತು ಸ.ನಂ. 84 ಆಗಿರುತ್ತದೆ. ವಸಂತಪ್ಪ ನನ್ನ ತಮ್ಮನಾಗಬೇಕು. ಸ.ನಂ.118ಕ್ಕೆ ಸಂಬಂಧಿಸಿದಂತೆ ನನ್ನ ತಮ್ಮ ವಸಂತಪ್ಪ ಅಸಲು ದಾವೆ ಸಂ. 661/2011 ಎಂಬ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನೇ ಜಿ.ಪಿ.ಎ.ನ್ನು ತೆಗೆದುಕೊಂಡು ದಾವೆ ನಡೆಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ಡಿಕ್ರಿಯಾಗಿದೆಯೇ ಅಥವಾ ವಜಾ ಆಗಿದೆಯೇ ಎಂದರೆ ಸಾಕ್ಷಿಯು ಅಸಲು ದಾವೆ ಸಂ. 661/2011ನ್ನು ಈ ಕೇಸು ಚಾಲ್ತಿಯಲ್ಲಿದ್ದ ಕಾರಣ ಪೆಂಡಿಂಗ್ ಇಡಲಾಗಿದೆ ಎಂದು ನುಡಿಯುತ್ತಾರೆ. ಅಸಲು ದಾವೆ ಸಂ. 661/2011ರ ದಾವೆಯು ವಜಾ ಆಗಿದೆ ಎಂದರೆ ಸಾಕ್ಷಿಯು ನಾವು ಇಂಜೆಂಕ್ಷನ್ ಕೇಳಿದ್ದು ಅವರು ನೀಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ಆದೇಶದ ವಿರುದ್ಧ ನಾನು ಆರ್.ಎ.5/2017ನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಆರ್.ಎ. ವಜಾ ಆಗಿರುತ್ತದೆ ಎಂದರೆ ಸರಿ. ಅದರ ಮೇಲೆ ನಾನು ಒಂದು ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿ. ಆ ಕೇಸಿನಲ್ಲಿ ಈವರೆಗೂ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ದಿನಾಂಕ 04-04-1974ರಂದು ಅಗ್ರಿಮೆಂಟ್ ಆಫ್ ಸೇಲ್ ಆಗಿದೆ ಎಂದು ಬರೆದಿದೆ ಎಂದರೆ ಸರಿ. ಸಾಕ್ಷಿಯು ಮುಂದುವರದು ಅದು 04-04-1974 ಅಲ್ಲ, ಅದು 24-04-1973 ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ನನ್ನ ವಾದಪತ್ರದಲ್ಲಿ ದಿನಾಂಕ 04-04-1974 ಎಂದು ತಪ್ಪಾಗಿ ಬರೆಯಲಾಗಿದೆ.

1ರಿಂದ 5ನೇ ಪ್ರತಿವಾದಿಯರು ನನ್ನ ಹಾಗೂ ನನ್ನ ಅಣ್ಣತಮ್ಮಂದಿರ ವಿರುದ್ಧ ಅಸಲು ದಾವೆ ಸಂ. 524/2011 ದಾವೆಯನ್ನು ವಿಭಾಗಕ್ಕಾಗಿ ಸಲ್ಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯರಿಗೆ ಆಸ್ತಿ ಕೊಡಬಾರದೆಂಬ ಉದ್ದೇಶದಿಂದ ನಾನು 2012ರಲ್ಲಿ ದಾಖಲಾತಿಗಳನ್ನು ಸೃಷ್ಟಿಸಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಗ್ರ್ಯಾಂಟ್ ಆದ ನಂತರ ಗುಮತಿ ಚಿನ್ನಪ್ಪ, ಕಾಕೋಡು ಅಲಿಯಾಸ್ ಗಂಟ್ಲೋಡುರವರಿಗೆ ನೋಟೀಸು ನೀಡಿ ನನ್ನ ಹೆಸರಿಗೆ ಕ್ರಯಪತ್ರವನ್ನು ಮಾಡಿಕೊಡಲು ಕೇಳಿರುವುದಿಲ್ಲ. ಗುಮತಿ ಚಿನ್ನಪ್ಪ, ಕಾಕೋಡು ಅಲಿಯಾಸ್ ಗಂಟ್ಲೋಡುರವರು ಜೀವಂತವಾಗಿದ್ದಾಗ ಅವರನ್ನು ಕ್ರಯಪತ್ರ ಮಾಡಿಕೊಡಲು ಕೇಳಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾನು ನ್ಯಾಯ ಪಂಚಾಯತಿ ಮಾಡಿಕೊಂಡು ನಂತರ ಮಾಡಿಕೊಡಲು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ನಿರ್ದಿಷ್ಟವಾಗಿ ಯಾವ ಯಾವ ದಿನಾಂಕದಂದು ನ್ಯಾಯ ಪಂಚಾಯತಿ ಆಗಿರುತ್ತದೆ

ಎಂದು ಗೊತ್ತಿಲ್ಲ, ಗುಮತಿ ಚಿನ್ನಪ್ಪ, ಕಾಕೋಡು ಅಲಿಯಾಸ್ ಗಂಟ್ಲೋಡುರವರು ಕ್ರಯಪತ್ರ ಮಾಡಿಕೊಡುತ್ತೇವೆ ಎಂದು ಯಾವುದೇ ನಿರ್ದಿಷ್ಟವಾದ ಪ್ರತ್ಯೇಕ ಪತ್ರ ಮಾಡಿಕೊಟ್ಟಿರುವುದಿಲ್ಲ. ಕಾಕೋಡು ಅಲಿಯಾಸ್ ಗಂಟ್ಲೋಡುರವರು ತೀರಿಕೊಂಡ ನಂತರ ನಾನು ಅವರ ವಾರಸುದಾರರಿಗೆ ಯಾವುದೇ ಲೀಗಲ್ ನೋಟೀಸನ್ನು ನೀಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ಅವರ ವಾರುಸದಾರರೇ ನಮ್ಮ ವಿರುದ್ಧ 2010ರಲ್ಲಿ ಪೊಲೀಸ್ ಕಂಪ್ಲೇಂಟ್ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಕಾಕೋಡು ಅಲಿಯಾಸ್ ಗಂಟ್ಲೋಡುರವರ ವಾರಸುದಾರರು ತಮಗೆ ಭಾಗ ಬರಬೇಕೆಂದು ಕೇಳಿಕೊಂಡು ಪೊಲೀಸ್ ಪಿರ್ಯಾದನ್ನು ನೀಡಿರುತ್ತಾರೆ. 2009ರಲ್ಲಿ ಗುಮತಿ ಚಿನ್ನಪ್ಪ ಮರಣ ಹೊಂದಿರುತ್ತಾರೆ ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಗುಮತಿ ಚಿನ್ನಪ್ಪ ಮರಣ ಹೊಂದಿರುತ್ತಾರೆ ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2009ರಲ್ಲಿ ಗುಮತಿ ಚಿನ್ನಪ್ಪ ಮರಣ ಹೊಂದಿದ ನಂತರ ನಾನು ಅವರ ವಾರಸುದಾರರಿಗೆ ಲೀಗಲ್ ನೋಟೀಸು ನೀಡಿರುತ್ತೇನೆ. ನಾನು ಯಾವುದೇ ಲೀಗಲ್ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ಅಸಲು ದಾವೆ ಸಂ. 524/2011ರಲ್ಲಿ ಯಾವುದೇ ಭಾಗವನ್ನು ಹೆಣ್ಣುಮಕ್ಕಳಿಗೆ ನೀಡಬಾರದೆಂಬ ದುರುದ್ದೇಶದಿಂದ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1973ರಲ್ಲಿ ಗುಮತಿ ಚಿನ್ನಪ್ಪ ಮತ್ತು ಗಂಟ್ಲೋಡುರವರು ನನ್ನ ತಂದೆಯ ಹೆಸರಿಗೆ ಕ್ರಯದ ಕರಾರಪತ್ರವನ್ನು ಬರೆದುಕೊಟ್ಟಿದ್ದರೂ ಕೂಡಾ ನಮಗೆ ಮೋಸ ಮಾಡಬೇಕೆಂಬ ದುರುದ್ದೇಶದಿಂದ ಅವರ ಹೆಣ್ಣುಮಕ್ಕಳು ಕರಾರುಪತ್ರ ಆಗಿಲ್ಲ ಎಂದು ಹೇಳಿರುತ್ತಾರೆ. ಗುಮತಿ ಚಿನ್ನಪ್ಪರವರು ಜೀವಂತವಿದ್ದಾಗ ಆತನಿಂದ ನಾನು ಯಾವುದೇ ಹೇಳಿಕೆ ಪತ್ರವನ್ನು ಕ್ರಯದ ಕರಾರುಪತ್ರ ಬರೆದುಕೊಟ್ಟ ಬಗ್ಗೆ ಪಡೆದುಕೊಂಡಿರುವುದಿಲ್ಲ. ಪ್ರತಿವಾದಿಯರಿಗೆ ಆಸ್ತಿ ಕೊಡಬಾರದೆಂಬ ದುರುದ್ದೇಶದಿಂದ ನಾನು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಮುಕ್ತಾಯದ ವೇಳೆಃ ಮಧ್ಯಾಹ್ನ *04-47 ಗಂಟೆ***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

**ಓದಿ ಹೇಳಿ ಕೇಳಿ ಸರಿ ಇದೆ,**

**(ರೂಪ. ಎಂ.ಡಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ**
**ಜೆ.ಎಂ.ಎಫ್.ಸಿ. ಕೆ.ಜಿ.ಎಫ್**